# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 148 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಕೆ.ವಿ ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 13-12-2021 |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು ಕೊಣನೂರು ಗ್ರಾಮದ ಪ್ರಾಥಮಿಕ ಅರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಹಳ್ಳಿಗಳ ಸಂಖ್ಯೆ ಮತ್ತು ಅಲ್ಲಿನ ಜನಸಂಖ್ಯೆ ಎಷ್ಟು; | ಕೊಣನೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರ ವ್ಯಾಪ್ತಿಗೆ ಬರುವ ಹಳ್ಳಿಗಳ ಸಂಖ್ಯೆ 33 ಒಳಪಟ್ಟಿದೆ, ಮತ್ತು ಅಲ್ಲಿನ ಜನಸಂಖ್ಯೆ 19,539 ಯನ್ನು ಹೊಂದಿದೆ. |
| ಆ | ಸದರಿ ಆರೋಗ್ಯ ಕೇಂದ್ರದಲ್ಲಿ ಪ್ರತಿ ತಿಂಗಳು ಒಳ ರೋಗಿಗಳಾಗಿ ಮತ್ತು ಹೊರ ರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ ಎಷ್ಟು; ಸದರಿ ಆರೋಗ್ಯ ಕೇಂದ್ರಕ್ಕೆ ಹೆಚ್ಚಿನ ಹೊರ ರೋಗಿಗಳು ಬರುವ ಕಾರಣದಿಂದ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಮೇಲ್ದರ್ಜೆಗೇರಿಸಲಾಗುವುದು; | ಪ್ರತಿ ತಿಂಗಳು ಅಂದಾಜು ಒಳರೋಗಿಗಳ ಸಂಖ್ಯೆ: 300 ಮತ್ತು ಹೊರರೋಗಿಗಳ ಸಂಖ್ಯೆ: 8500-9000.<br>ಕೊಣನೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಇ | ಸದರಿ ಅರೋಗ್ಯ ಕೇಂದ್ರಕ್ಕೆ ಮಂಜೂರಾದ ಸಿಬ್ಬಂದಿ ಎಷ್ಟು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು; ಸಿಬ್ಬಂದಿ ಕೊರತೆಯಿಂದ ಸಾರ್ವಜನಿಕರಿಗೆ ಸೂಕ್ತ ಚಿಕಿತ್ಸೆ ದೊರೆಯದೆ ತೊಂದರೆಯಾಗುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; | ಸದರಿ ಅರೋಗ್ಯ ಕೇಂದ್ರಕ್ಕೆ ಮಂಜೂರಾದ ಸಿಬ್ಬಂದಿ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಹಾಗೂ ಕೊರತೆಯಿರುವ ಸಿಬ್ಬಂದಿಗಳ ಸಂಖ್ಯೆಯನ್ನು **ಅನುಬಂಧದಲ್ಲಿ** ನೀಡಲಾಗಿದೆ.<br>ಪ್ರಸ್ತುತ ಇರುವ ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ. |
| ಈ | ಆರೋಗ್ಯ ಕೇಂದ್ರದ ವಸತಿ ಗೃಹಗಳು ಶಿಥಿಲವಾಗಿದ್ದು, ಸಿಬ್ಬಂದಿ ವಾಸಿಸಲು ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸದಾಗಿ ವಸತಿ ಗೃಹಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮವೇನು? | ಬಂದಿದೆ.<br>ಹೊಸದಾಗಿ ವಸತಿ ಗೃಹಗಳ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ಪಡೆದು ಕ್ರಮ ಕೈಗೊಳ್ಳಲಾಗುವುದು. |

ಆಕುಕ 138 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-೭

## ಸಮುದಾಯ ಆರೋಗ್ಯ ಕೇಂದ್ರ ಕೊಣನೂರು ಇಲ್ಲಿನ ಸಿಬ್ಬಂದಿ ವಿವರ

| ಕ್ರಸಂ | ಹುದ್ದೆಯ ವಿವರ | ಮಂಜೂರು | ಭರ್ತಿ | ಖಾಲಿ | ಷರಾ |
|---|---|---|---|---|---|
| 1 | ಹಿರಿಯ ವೈದ್ಯಾಧಿಕಾರಿಗಳು | 1 | 0 | 1 | ಕಡ್ಡಾಯ ಗ್ರಾಮೀಣ ಸೇವೆ ಅಡಿಯಲ್ಲಿ ಒಬ್ಬರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರ ಬನ್ನೂರು ಇಲ್ಲಿಂದ ಒಬ್ಬರು ಎಂಬಿಬಿಎಸ್ ವೈದ್ಯರನ್ನು ಸಂಪೂರ್ಣ ನಿಯೋಜನೆ ಮಾಡಲಾಗಿದೆ ಹಾಗೂ ಸದರಿ ಅರಕಲಗೂಡು ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳನ್ನು ಪ್ರತಿ ದಿನಕ್ಕೆ ಒಬ್ಬರಂತೆ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜನೆ ಮಾಡಿದೆ. |
| 2 | ಮಕ್ಕಳ ತಜ್ಞರು | 1 | 0 | 1 | ಗುತ್ತಿಗೆ ಎಂ.ಬಿ.ಬಿ.ಎಸ್ ವೈದ್ಯರು ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 3 | ಪ್ರಸೂತಿ & ಸ್ತ್ರೀರೋಗ ತಜ್ಞರು | 1 | 0 | 1 | ಸರ್ಕಾರದ ಹಂತದಲ್ಲಿ ನೇಮಕಾತಿ ಮಾಡಲಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ |
| 4 | ಅರವಳಿಕೆ ತಜ್ಞರು | 1 | 0 | 1 | ಸರ್ಕಾರದ ಹಂತದಲ್ಲಿ ನೇಮಕಾತಿ ಮಾಡಲಾಗಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ |
| 5 | ದಂತ ವೈದ್ಯಾಧಿಕಾರಿಗಳು | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 6 | ಕಛೇರಿ ಅಧೀಕ್ಷಕರು | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 7 | ಶುಶ್ರೂಷಕ ಅಧಿಕಾರಿಗಳು | 6 | 6 | 0 | ಹುದ್ದೆ ಖಾಲಿ ಇರುವುದಿಲ್ಲ |
| 8 | ಕ್ಷ-ಕಿರಣ ತಂತ್ರಜ್ಞರು | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 9 | ಪ್ರಯೋಗಶಾಲಾ ತಂತ್ರಜ್ಞರು | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ, ಹೊರಗುತ್ತಿಗೆ ಆಧಾರದಲ್ಲಿ ಒಬ್ಬರು ಪ್ರಯೋಗಶಾಲಾ ತಂತ್ರಜ್ಞರನ್ನು ನೇಮಕ ಮಾಡಿಕೊಳ್ಳಲಾಗಿದೆ. |
| 10 | ಫಾರ್ಮಸಿ ಅಧಿಕಾರಿಗಳು | 2 | 0 | 2 | ಹುದ್ದೆ ಖಾಲಿ ಇರುವುದಿಲ್ಲ, ಹೊರಗುತ್ತಿಗೆ ಆಧಾರದಲ್ಲಿ ಒಬ್ಬರು ಫಾರ್ಮಸಿ ಅಧಿಕಾರಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ |
| 11 | ಪ್ರ.ದ.ಸ | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 12 | ನೇತ್ರಾಧಿಕಾರಿಗಳು | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 13 | ಕಿ.ಮ.ಆ.ಸ | 6 | 2 | 4 | 02 ಹುದ್ದೆಗಳು ಭರ್ತಿ ಆಗಿರುತ್ತವೆ |
| 14 | ಕಿ.ಪು.ಆ.ಸ | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 15 | ಹಿ.ಪು.ಆ.ಸ | 1 | 1 | 0 | ಹುದ್ದೆ ಖಾಲಿ ಇರುವುದಿಲ್ಲ |
| 16 | ವಾಹನ ಚಾಲಕರು | 2 | 2 | 0 | ಹುದ್ದೆ ಖಾಲಿ ಇರುವುದಿಲ್ಲ |
| 17 | ದ್ವಿ.ದ.ಸ | 2 | 1 | 1 | 01 ಹುದ್ದೆಗಳು ಭರ್ತಿ ಆಗಿರುತ್ತವೆ |
| 18 | ಗ್ರೂಪ್-ಡಿ | 12 | 1 | 11 | 01 ಹುದ್ದೆಗಳು ಭರ್ತಿ ಆಗಿರುತ್ತವೆ, ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಆಧಾರದಲ್ಲಿ 6 ಜನ ಗ್ರೂಪ್ ಡಿ ಮತ್ತು 4 ಜನ ನಾನ್ ಕ್ಲಿನಿಕಲ್ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ಕಾರದ ಆದೇಶದ ಪ್ರಕಾರ 01 ಹುದ್ದೆಯನ್ನು ಖಾಲಿ ಇರಿಸಲಾಗಿದೆ. |
| | ಒಟ್ಟು | 42 | 20 | 22 | |

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು, ಹಾಸನ